## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 712

ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 17.09.2021

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ರೈತರ ಕೃಷಿ ಆದಾಯವನ್ನು ದ್ವಿಗುಣಗೊಳಿಸುವ ಯೋಜನೆ (Doubling of Farmers Income – DFI) ಅಡಿಯಲ್ಲಿ ಜಾರಿಗೊಳಿಸುತ್ತಿರುವ ಕೇಂದ್ರ ಸರ್ಕಾರದ ಯೋಜನೆಗಳು ಯಾವುವು; (ಈ ಯೋಜನೆಗಳ ರೂಪು-ರೇಷೆಗಳ ಬಗ್ಗೆ ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ರೈತರ ಕೃಷಿ ಆದಾಯವನ್ನು ದ್ವಿಗುಣಗೊಳಿಸುವ ಯೋಜನೆ ಅಡಿಯಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯತೆ ಕಾರ್ಯಕ್ರಮ ಮತ್ತು ರೈತ ಸಂಪರ್ಕ ಕೇಂದ್ರಗಳ ಮೂಲಕ ಕೃಷಿ ವಿಸ್ತರಣೆಯ ಬಲವರ್ಧನೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಗಳ ರೂಪು-ರೇಷೆಗಳ ಪೂರ್ಣ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.<br><br>Doubling of Farmers Income – (DFI) is being implemented in the State through Integrated Farming System (IFS) replication and Popularization program and Strengthening of Agri Extension system through Raita Samparka Kendras (RSK's) under centrally sponsored Rashtriya Krishi Vikasa Yojane (RKVY)., The details of the scheme are given in annexure. |
| ಆ. | ರಾಜ್ಯ ಸರ್ಕಾರಕ್ಕೆ ಈ ಯೋಜನೆಗಳ ಅಡಿಯಲ್ಲಿ ದೊರೆಯುವ ಸಹಾಯಧನ, ಆರ್ಥಿಕ ನೆರವು ಮತ್ತು | ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯತೆ ಕಾರ್ಯಕ್ರಮ ಮತ್ತು ರೈತ ಸಂಪರ್ಕ ಕೇಂದ್ರಗಳ ಮೂಲಕ ಕೃಷಿ ವಿಸ್ತರಣೆಯ ಬಲವರ್ಧನೆ ಕಾರ್ಯಕ್ರಮಗಳಡಿಯಲ್ಲಿ ದೊರೆಯುವ ಸಹಾಯಧನ, ಆರ್ಥಿಕ ನೆರವು |

| | | |
|---|---|---|
| | ಇತರೆ ಸೌಲಭ್ಯಗಳು ಯಾವ ಯಾವ ಅನುಪಾತದಲ್ಲಿ ಕೇಂದ್ರ ಸರ್ಕಾರದಿಂದ ಲಭ್ಯವಾಗುತ್ತಿದೆ; (ಪೂರ್ಣ ವಿವರ ನೀಡುವುದು) | ಮತ್ತು ಇತರೆ ಸೌಲಭ್ಯಗಳು ಕೇಂದ್ರ ಹಾಗೂ ರಾಜ್ಯದ ಪಾಲು ಕ್ರಮವಾಗಿ 60 ಹಾಗೂ 40 ರ ಅನುಪಾತದಲ್ಲಿರುತ್ತವೆ. ವಿವರ ಕೆಳಗಿನಂತಿದೆ. |

(ರೂ. ಲಕ್ಷಗಳಲ್ಲಿ)

| ಕ್ರಸಂ. | ಕಾರ್ಯಕ್ರಮ | ಕೇಂದ್ರದಪಾಲು | ರಾಜ್ಯದಪಾಲು | ಒಟ್ಟು |
|---|---|---|---|---|
| 1 | ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯತೆ ಕಾರ್ಯಕ್ರಮ | 4340.4 | 2893.6 | 7234.00 |
| 2. | ರೈತ ಸಂಪರ್ಕ ಕೇಂದ್ರಗಳ ಮೂಲಕ ಕೃಷಿ ವಿಸ್ತರಣೆಯ ಬಲವರ್ಧನೆ ಕಾರ್ಯಕ್ರಮ | 124.80 | 83.20 | 208.00 |

Subsidies, Financial assistance and other benefits in Integrated Farming System (IFS) replication and Popularization program and Strengthening Agri Extension system through RSKs under Centrally sponsored Rashtriya Krishi VikasaYojane(RKVY) are in the ratio of 60 and 40

as Central and State share respectively.

(Rs. Lakhs)

| S.N | Programs | Central share | State share | Total |
|---|---|---|---|---|
| 1 | Integrated Farming System (IFS) replication and Populerisation program | 4340.40 | 2893.6 | 7234.00 |
| 2. | Strengthening Agri Extension system through Raita Samparka Kendras (RSK's) | 124.80 | 83.20 | 208.00 |

| | | |
|---|---|---|
| ೩. | ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ರೈತರ ಕೃಷಿ ಆದಾಯವನ್ನು 2022ನೇ ಸಾಲಿಗೆ ದ್ವಿಗುಣಗೊಳಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿರ್ಮಿಸಿರುವ ವ್ಯವಸ್ಥೆಗಳು | ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ರೈತರ ಕೃಷಿ ಆದಾಯವನ್ನು 2022ನೇ ಸಾಲಿಗೆ ದ್ವಿಗುಣಗೊಳಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಕೆಳಗಿನಂತೆ ವ್ಯವಸ್ಥೆಗಳನ್ನು ನಿರ್ಮಿಸಲಾಗಿದೆ.<br><br>**ಕೇಂದ್ರ ಮಟ್ಟದಲ್ಲಿ:** ರೈತರ ಆದಾಯವನ್ನು ದ್ವಿಗುಣಗೊಳಿಸುವುದಕ್ಕೆ ಸಂಬಂಧಿಸಿದ ಸೂಕ್ತ ಕಾರ್ಯತಂತ್ರ ಮತ್ತು ಸೂಕ್ತ ಶಿಫಾರಸ್ಸುಗಳನ್ನು ನೀಡಲು ಅಂತರ ಮಂತ್ರಾಲಯಗಳ ಸಮಿತಿ |

| | | |
|---|---|---|
| | | two years in order to establish IFS model as learning sites in every Gramapanchayth (6027) of the State. |
| ಈ | ರಾಜ್ಯದಲ್ಲಿ ಕೇಂದ್ರ ಸರ್ಕಾರದ, ರೈತರ ಕೃಷಿ ಆದಾಯವನ್ನು ದ್ವಿಗುಣಗೊಳಿಸುವ ಯೋಜನೆಗಳ ಅನುಷ್ಠಾನದ ಪ್ರಗತಿ, ರೈತರ ಆರ್ಥಿಕ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗಿರುವ ಕುಂಠಿತವನ್ನು ಅಧ್ಯಯನ ನಡೆಸಲು ರಾಜ್ಯ ಸರ್ಕಾರ ತಜ್ಞರ ಸಮಿತಿಯನ್ನು ರಚಿಸಿದೆಯೇ; ಇಲ್ಲದಿದ್ದಲ್ಲಿ ರಚಿಸಲು ಮುಂದಾಗುವುದೇ? | ರಾಜ್ಯದಲ್ಲಿ ರೈತರ ಆದಾಯ ದ್ವಿಗುಣಗೊಳಿಸುವ ಕುರಿತು ಪರಾಮರ್ಶಿಸುವ ಸಲುವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರದ ಆದೇಶದ ಸಂಖ್ಯೆ: AGRI-ACT/81/2019 ದಿನಾಂಕ.22-08-2019 ರನ್ವಯ ರಚಿಸಲಾಗಿದೆ. ಎಲ್ಲಾ ಸಂಬಂಧಿಸಿದ ಇಲಾಖೆಗಳ ಕಾರ್ಯದರ್ಶಿಗಳು, ಆಯುಕ್ತರು, ನಿರ್ದೇಶಕರು, ವಿಭಾಗಿಯ ನಿರ್ದೇಶಕರು-ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಎಸ್.ಎಲ್.ಬಿ.ಸಿ ಕನ್ವೀನರ್ ಬ್ಯಾಂಕ್, ನಬಾರ್ಡ ಮತ್ತು ಎಲ್ಲಾ ಕೃಷಿ, ತೋಟಗಾರಿಕೆ ಮತ್ತು ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳ ಸಂಶೋಧನಾ ನಿರ್ದೇಶಕರುಗಳು ಸದರಿ ಸಮಿತಿಯ ಸದಸ್ಯರು ಆಗಿರುತ್ತಾರೆ.<br><br>As per Govt. order no. AGRI-ACT/81/2019 dated 22-08-2019, High power committee has been formed under the chairmanship of Additional Chief Secretary and Development Commissioner comprising of all related department secretaries, Commissioners and Directors, Regional Director-RBI, SLBC Convener banks, CGM- NABARD and all university Director of Research as members of the committee. |

ಸಂಖ್ಯೆ: AGRI-ASC/71/2021

(ಬಿ. ಸಿ. ಪಾಟೀಲ್)
ಕೃಷಿ ಸಚಿವರು

# ಅನುಬಂಧ-
## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 712

**2020-21 ಹಾಗೂ 2021-22 ನೇ ಸಾಲಿಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳ ಮೂಲಕ ಕೃಷಿ ವಿಸ್ತರಣೆಯ ಬಲವರ್ಧನೆಗಾಗಿ ಸಭೆ ಆಯೋಜನೆ ಕಾರ್ಯಕ್ರಮದ ರೂಪುರೇಷೆ**

2020-21 ನೇ ಸಾಲಿಗೆ ರಾಜ್ಯದಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವ ಸಂಬಂಧ ಕ್ಷೇತ್ರಮಟ್ಟದಲ್ಲಿ ಸಮಗ್ರ ಬದಲಾವಣೆಗಳನ್ನು ತರುವುದು ಅವಶ್ಯವಾಗಿರುತ್ತದೆ. ಪ್ರಸ್ತುತ ರೈತ ಸಂಪರ್ಕ ಕೇಂದ್ರಗಳನ್ನು ರೈತರಿಗೆ ಮಾಹಿತಿ ತಂತ್ರಜ್ಞಾನ ವಿನಿಮಯಕ್ಕೆ ಹೆಚ್ಚಿನ ಒತ್ತು ನೀಡುವುದರ ಮೂಲಕ ನೋಡಲ್ ಕ್ರಿಯಾಶೀಲ ಕೇಂದ್ರಗಳಾಗಿ ಬಲಪಡಿಸಲು ಹಾಗೂ ರೈತರ ಆದಾಯವನ್ನು ದ್ವಿಗುಣಗೊಳಿಸಲು ಕ್ಷೇತ್ರಮಟ್ಟದಲ್ಲಿ ಕ್ರಮವಹಿಸಲು ಸರ್ಕಾರದ ಆದೇಶ ಸಂಖ್ಯೆAGRI.Act/112/2019 ಬೆಂಗಳೂರು, ದಿನಾಂಕ: 31.10.2019 ರಂದು ಆದೇಶ ಹೊರಡಿಸಿದೆ. ಈ ಹಿನ್ನಲೆಯಲ್ಲಿ ಪ್ರತಿ ತಿಂಗಳ 1 ಮತ್ತು 3 ನೇ ವಾರದ ಸೋಮವಾರದಂದು ಬೆಳಿಗ್ಗೆ 10.00 ರಿಂದ 1.00 ಗಂಟೆಯವರೆಗೆ ಸಭೆ ನಡೆಸಲು ಸೂಚಿಸಲಾಗಿರುತ್ತದೆ. ಈ ಸಭೆಗಳಲ್ಲಿ ಕೃಷಿ ಮತ್ತು ಸಂಬಂಧಿತ ಇಲಾಖೆಗಳಾದ ತೋಟಗಾರಿಕೆ, ರೇಷ್ಮೆ (ಜಿಲ್ಲೆಯಲ್ಲಿ ಕಛೇರಿ ಇದ್ದರೆ) ಪಶು ಸಂಗೋಪನೆ, ಅರಣ್ಯ, ಸಹಕಾರ ಇತ್ಯಾದಿ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿ/ ಸಿಬ್ಬಂದಿಗಳು ಬಾಗವಹಿಸಿ ರೈತರೊಂದಿಗೆ ಚರ್ಚಿಸಲಾಗುತ್ತದೆ. 2020-21 ನೇ ಸಾಲಿಗೆ 742 ರೈತ ಸಂಪರ್ಕ ಕೇಂದ್ರಗಳಲ್ಲಿ 2942 ಸಭೆಗಳನ್ನು ನಡೆಸಿದ್ದು , ಒಟ್ಟು 50.00 ಲಕ್ಷ ರೂ ಬಿಡುಗಡೆಗೆ ರೂ.47.11 ಲಕ್ಷ ಪ್ರಗತಿಯಾಗಿರುತ್ತದೆ.

2021-22 ನೇ ಸಾಲಿಗೆ ಮಾಹೆವಾರು ಒಂದು ಸಭೆಯಂತೆ, **12 ಸಭೆಗಳನ್ನು** ರೈತಸಂಪರ್ಕ ಕೇಂದ್ರದಲ್ಲಿ (ಪ್ರತೀ ತಿಂಗಳ ಮೊದಲನೇ ಸೋಮವಾರದಂದು) ನಡೆಸಲು ಸೂಚಿಸಲಾಗಿದೆ ಮುಂದುವರೆದು, ಪ್ರತಿ ಹೋಬಳಿಗೆ ಒಂದರಂತೆ ಆಯ್ಕೆ ಮಾಡಲಾದ ಮಾದರಿ ಗ್ರಾಮದಲ್ಲಿ ತ್ರೈಮಾಸಿಕಕ್ಕೆ **ಒಂದರಂತೆ 4 ಸಭೆಗಳನ್ನು** ಏರ್ಪಡಿಸಲು ಕಾರ್ಯಕ್ರಮ ನೀಡಲಾಗಿದೆ. ಒಟ್ಟಾರೆ, ಮಾಹೆವಾರು 12 ಸಭೆಗಳು ಹಾಗೂ ತ್ರೈಮಾಸಿಕ 4 ಸಭೆಗಳು ಸೇರಿ **16 ಸಭೆಗಳನ್ನು** ಆಯೋಜಿಸಲು ಅನುದಾನ ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ ವರ್ಷದಲ್ಲಿ 742 ರೈತ ಸಂಪರ್ಕ ಕೇಂದ್ರಗಳಲ್ಲಿ 11872 ಸಭೆಗಳನ್ನು ನಡೆಸಲು ರೂ.208.00 ಲಕ್ಷಗಳ ಅನುದಾನ ಮೀಸಲಿಡಲಾಗಿದೆ. 2021-22ನೇ ಸಾಲಿನಲ್ಲಿ ಇಲ್ಲಿಯವರೆಗೆ 2226 ಸಭೆಗಳನ್ನು ನಡೆಸಲಾಗಿದೆ.

ರೈತ ಸಂಪರ್ಕ ಕೇಂದ್ರಗಳಲ್ಲಿ ಬೆಳಿಗ್ಗೆ 10.00 ರಿಂದ 1.00 ಗಂಟೆಯವರೆಗೆ ಸಭೆ ನಡೆಸಿ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ರೈತರಿಗೆ ಮಾಹಿತಿ ನೀಡಲು ಕ್ರಮವಹಿಸತಕ್ಕದ್ದು ಹಾಗೂ ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಲೀಡ್ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕರು ಸಹ ಈ ಸಭೆಗಳಲ್ಲಿ ಭಾಗವಹಿಸುವುದು.

ಅ. ವಿವಿಧ ಯೋಜನೆಗಳು ಮತ್ತು ಅವುಗಳನ್ನು ಒಗ್ಗೂಡಿಸುವ ಬಗ್ಗೆ
ಆ. ನೂತನ ತಾಂತ್ರಿಕತೆಗಳ ಅಳವಡಿಕೆ ಬಗ್ಗೆ
ಇ. ಮುಂದಿನ 30 ದಿನಗಳ ಹವಾಮಾನ ಮುನ್ಸೂಚನೆ ಹಾಗೂ ಹವಾಮಾನ ವಿಕೋಪಗಳನ್ನು ಎದುರಿಸಲು ಕೈಗೊಳ್ಳುವ ಕ್ರಮಗಳ ಬಗ್ಗೆ
ಈ. ಮಾರುಕಟ್ಟೆ ಸೌಲಭ್ಯಗಳ ಬಗ್ಗೆ
ಉ. ಪ್ರಸ್ತುತ ಕೃಷಿ/ ತೋಟಗಾರಿಕೆ/ ರೇಷ್ಮೆ ಉತ್ಪನ್ನಗಳು ಹಾಗೂ ಕೃಷಿ ರಹಿತ ಉತ್ಪನ್ನಗಳ ಮಾರಾಟ ದರ ಕುರಿತು
ಊ. ಕೀಟ / ರೋಗಬಾಧೆ ಬರುವ ಸಾಧ್ಯತೆ ಮತ್ತು ನಿರ್ವಹಣೆ ಬಗ್ಗೆ

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (ಲೆ.ಶೀ.2401-00-800-1-57 ಉ.ಶೀ.059) ಅನುದಾನ ಒದಗಿಸಲಾಗಿದ್ದು, ಪ್ರತಿ ರೈತ ಸಂಪರ್ಕ ಕೇಂದ್ರದ ಪ್ರತಿ ಸಭೆಗೆ ರೂ. 1750/- ವೆಚ್ಚ ಭರಿಸಬಹುದಾಗಿದೆ.

## 2021-22 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಯ ವಿಸ್ತರಣ ಹಾಗೂ ಜನಪ್ರಿಯಗೊಳಿಸುವ ಕಾರ್ಯಕ್ರಮದ ರೂಪುರೇಷೆ

**ಪೀಠಿಕೆ**: 2021-22 ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ- ಸಮಗ್ರ ಕೃಷಿ ಪದ್ಧತಿಯ ವಿಸ್ತರಣ ಹಾಗೂ ಜನಪ್ರಿಯಗೊಳಿಸುವ ಕಾರ್ಯಕ್ರಮದಡಿ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ತೋಟಗಾರಿಕೆ ಹಾಗೂ ಪಶುಸಂಗೋಪನೆಗಳನ್ನು ಒಗ್ಗೂಡಿಸಿ "ಸಮಗ್ರ ಕೃಷಿ ಪದ್ಧತಿ "ಮೂಲಕ ರೈತರ ಆದಾಯ ಹೆಚ್ಚಳ ಮಾಡುವುದು ಹಾಗೂ ಅಳವಡಿಸಿದ ಪ್ರದೇಶದಲ್ಲಿ/ ಜಮೀನಿನಲ್ಲಿ ಬೆಳೆ ಉತ್ಪಾದಕತೆ ಸುಸ್ಥಿರತೆ, ಸಮತೋಲನಾ ಆಹಾರ ಉತ್ಪಾದನೆ, ತಾಜ್ಯಗಳ ಮರುಬಳಕೆ ಹಾಗೂ ವರ್ಷಪೂರ್ತಿ ಆದಾಯ ಹೆಚ್ಚಿಸುವುದು ಮುಖ್ಯ ಗುರಿಯಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ 6027 ಗ್ರಾಮಪಂಚಾಯಿತಿಗಳಿದ್ದು, ಇದರಲ್ಲಿ ಮಳೆ ಪ್ರಮಾಣದ ಆಧಾರದಲ್ಲಿ 4100 ಗ್ರಾಮ ಪಂಚಾಯಿತಿಗಳನ್ನು ಮಳೆಯಾಶ್ರಿತ ಪ್ರದೇಶಗಳಿಗಾಗಿ ಹಾಗೂ 1927 ಗ್ರಾಮ ಪಂಚಾಯಿತಿಗಳನ್ನು ನೀರಾವರಿ ಮಾದರಿಗಳಾಗಿ ಅನುಷ್ಠಾನಗೊಳಿಸಲು ಯೋಜಿಸಲಾಗಿರುತ್ತದೆ. ಈ ಯೋಜನೆಯಡಿ ಎರಡು ವರ್ಷಗಳಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸಮಗ್ರ ಕೃಷಿ ಪದ್ಧತಿಯ ಮಾದರಿ ಸ್ಥಾಪಿಸಲು ಯೋಜಿಸಿದೆ. **ಪ್ರಸಕ್ತ ವರ್ಷದಲ್ಲಿ ಮಳೆಯಾಶ್ರಿತ ಪ್ರದೇಶಗಳ 2050 ಗ್ರಾಮ ಪಂಚಾಯಿತಿಗಳನ್ನು ಹಾಗೂ ನೀರಾವರಿ ಪ್ರದೇಶದ 964 ಗ್ರಾಮ ಪಂಚಾಯಿತಿಗಳಲ್ಲಿ ಸಮಗ್ರ ಕೃಷಿ ಪದ್ಧತಿಯ ಮಾದರಿ ಹಾಗೂ ಇತರೆ ರೈತರಿಗೆ ಕಲಿಕಾ ಕ್ಷೇತ್ರವಾಗಿ ಸ್ಥಾಪಿಸಲು ಯೋಜಿಸಲಾಗಿದೆ.**

### ಕಾರ್ಯಕ್ರಮದ ಉದ್ದೇಶಗಳು

1. ಕೃಷಿ ಹಾಗೂ ಸಂಬಂಧಿತ ಕಾರ್ಯಕ್ಷೇತ್ರಗಳಲ್ಲಿ "ಸಮಗ್ರ ಕೃಷಿ ಪದ್ಧತಿ ಮಾದರಿಗಳನ್ನು ಸಿದ್ಧಪಡಿಸಿದು ಆಯಾ ಕ್ಷೇತ್ರಕ್ಕೆ ಸೂಕ್ತವಾಗುವಂತೆ ಅಳವಡಿಸುವುದು.
2. ಉತ್ತಮ ಬೇಸಾಯ ಪದ್ಧತಿಗಳಾದ ನೂತನ ತಾಂತ್ರಿಕತೆಗಳು, ಅಧಿಕ ಇಳುವರಿ ಕೊಡುವ ತಳಿಗಳನ ಸಂಯೋಜನೆಯಲ್ಲಿ ಬಳಸುವುದು.
3. ರೈತರ ಆದಾಯ ಹೆಚ್ಚಿಸಲು ಕೃಷಿ ಜೊತೆಗೆ ಇತರೆ ಆದಾಯ ಬರುವ ಉದ್ದಿಮೆಗಳನ್ನು ಅಳವಡಿಸಲ ಪ್ರೇರೇಪಿಸುವುದು.

### ಪ್ರದೇಶ ಹಾಗೂ ಫಲಾನುಭವಿ ಆಯ್ಕೆ:

1. ಪ್ರತಿ ಪಂಚಾಯಿತಿಗೆ ಒಂದರಂತೆ ಪ್ರತಿ ಹೋಬಳಿಯಲ್ಲಿ 8-10 ಸಮಗ್ರ ಕೃಷಿ ಪದ್ಧತಿ ತಾಕುಗಳನ ಆಯಾ ಜಿಲ್ಲೆಗಳ ಮಳೆಯಾಶ್ರಿತ ಪ್ರದೇಶ ಅಥವಾ ನೀರಾವರಿ ಪ್ರದೇಶಕ್ಕನುಗುಣವಾ ಸ್ಥಾಪಿಸುವುದು. ಮೊದಲನೆಯ ವರ್ಷದಲ್ಲಿ ಹೋಬಳಿಯ ಶೇ. 50 ರಷ್ಟು ಗ್ರಾಮ ಪಂಚಾಯತಿಯ ಹಾಗೂ ಉಳಿಕೆ ಶೇ. 50 ರಷ್ಟು ಮುಂದಿನ ವರ್ಷದಲ್ಲಿ ಸ್ಥಾಪಿಸುವುದು.
2. ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷತೆಗಳನ್ನು ಕನಿಷ್ಠ 1 ಎಕರೆಯಿಂದ – ಗರಿಷ್ಠ 1 ಹೆಕ್ಟೇರ್ ಪ್ರದೇಶದಲ್ಲಿ ಏರ್ಪಡಿಸುವುದು.
3. ರೈತ ಸಂಪರ್ಕ ಕೇಂದ್ರವಾರು ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿ ತಮ್ಮ ವ್ಯಾಪ್ತಿ ಅನುಷ್ಠಾನ ಮಾಡುವ ರೈತರ ಪಟ್ಟಿಯನ್ನು ಸಿದ್ಧಪಡಿಸುವುದು. ಫಲಾನುಭವಿಯು ಆಸಕ್ತ ಪ್ರ ಪರ ರೈತನಾಗಿದ್ದು ಸಮಗ್ರ ಕೃಷಿ ಪದ್ಧತಿ ಅಳವಡಿಸಲು ಶೇ. 50 ರಷ್ಟು ವಂತಿಕೆ ಭರಿಸ ಸಿದ್ಧನಾಗಿರಬೇಕು. ಇತರೆ ರೈತರು ಅಳವಡಿಸಲು ಸೂಕ್ತವಾಗುವಂತೆ ಮಾದರಿಯಾಗಿ ಸಮಗ್ರ ಕ ಪದ್ಧತಿಯ ತಾಕನ್ನು ರೂಪಿಸುವ ಮನೋಭಾವನೆ ಇರುವ ರೈತರನ್ನು ಆಯ್ಕೆ ಮಾಡುವುದು.

4. ನಿಯಮಾನುಸಾರ ಪರಿಶಿಷ್ಟ ಜಾತಿ (17.1%), ಪರಿಶಿಷ್ಟ ಪಂಗಡ (6.9%) ರಂತೆ ಆಯ್ಕೆ ಮಾಡುವುದು. ಮಹಿಳೆಯರಿಗೆ (33%) ರಷ್ಟು, ಅಲ್ಪ ಸಂಖ್ಯಾತರಿಗೆ (15%) ಆದ್ಯತೆ ನೀಡುವುದು.

ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ ಅಡಿಯಲ್ಲಿ ಸಮಗ್ರ ಕೃಷಿ ಮಾದರಿ ಸ್ಥಾಪಿಸಲು 2021-22 ಹಾಗೂ 2022-23 ನೇ ಸಾಲಿಗೆ ಒಟ್ಟಾರೆ 72.736 ಕೋಟಿ ರೂಗಳ ಅನುದಾನ ಅನುಮೋದನೆಯಾಗಿದ್ದು, ಪ್ರತಿ ಪಂಚಾಯಿತಿಗೆ (10-15 ಗ್ರಾಮಗಳಿಗೆ) ಒಂದರಂತೆ ಮಳೆಯಾಶ್ರಿತ / ನೀರಾವರಿ ಮಾದರಿಗಳನ್ನು ಅಳವಡಿಸಲಾಗುವುದು. ಪ್ರಸ್ತುತ ವರ್ಷದಲ್ಲಿ ಶೇ.50 ರಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಸಮಗ್ರ ಕೃಷಿ ಪದ್ಧತಿ ಮಾದರಿಗಳನ್ನು ಅನುಷ್ಠಾನಗೊಳಿಸಲು 36.37 ಕೋಟಿ ರೂ.ಗಳ ಕಾರ್ಯಕ್ರಮ ರೂಪಿಸಲಾಗಿದೆ.

ಪ್ರಸ್ತುತ ಫಲಾನುಭವಿ ಆಯ್ಕೆ ಪ್ರಗತಿಯಲ್ಲಿರುತ್ತದೆ.